ನನ್ನಲ್ಲಿ ಅಪೂರ್ಣವಾಗಿಯೇ ಉಳಿದುಬಿಟ್ಟಿವೆ.

ಒಮ್ಮೊಮ್ಮೆ ಅನ್ನಿಸುತ್ತದಲ್ಲ, ಬಹಳ ಕಾಲವಾದ ಅನಂತರ ಒಂದು ಘಟನೆಯನ್ನು ನೆನಪಿಸಿಕೊಂಡರೆ ಅದು ಆ ಕಾಲದಲ್ಲಿ ಬಿದ್ದ ಕನಸೋ, ಅಥವಾ ನಿಜದಲ್ಲಿ ನಡೆದದ್ದೋ ಎಂಬ ಗೆರೆಯೇ ಅಳಿಸಿಹೋಗಿರುತ್ತದಲ್ಲ, ಅಂಥದೇ ಒಂದು ನೆನಪು ಸದಾನ ಬಗ್ಗೆಯೂ ನನಗೆ ಇದೆ. ಅವನನ್ನು ಒಮ್ಮೆಯೂ ಸ್ಪರ್ಶಿಸಿದ ನೆನಪಿಲ್ಲದ ಕಾರಣ ಇದನ್ನು ಕನಸು ಎಂದು ಸಾರಾಸಗಟಾಗಿ ತೆಗೆದುಹಾಕಲೂ ನನಗೆ ಸಾಧ್ಯವಿಲ್ಲ.

ಒಂದು ಸಂಜೆ ಅದೇ ಕಲ್ಲು ಪಾಗಾರದ ಮೇಲೆ ನಾನು ಮತ್ತು ಸದಾ ಕಾಲಾಡಿಸುತ್ತ ಕುಳಿತಿದ್ದೆವು. ನಾನು ತೊಟ್ಟ ನೀಲಿ ಫ್ರಾಕಿಗೆ ತಾಕಿದ್ದ ಮುಳ್ಳೊಂದನ್ನು ತೆಗೆಯಲು ನಾನು ಬಗ್ಗಿ ಪಾಗಾರದಿಂದ ಆಯ ತಪ್ಪಿದೆ. ಕೆಳಗೆ ಬೀಳದೇ ಇದ್ದಲ್ಲೇ ಸಾವರಿಸಿಕೊಂಡು ಮತ್ತೆ ನೆಟ್ಟಗೆ ಕುಳಿತೆ. ಎಲ್ಲಿ ಬಿದ್ದೇ ಬಿಡುತ್ತೇನೋ ಎಂದು ಸದಾ ನನ್ನ ಹೆಗಲು ಮುಟ್ಟಿ ತಕ್ಷಣ ಕೈ ಹಿಂದಕ್ಕೆಳೆದುಕೊಂಡ.

ಅವನ ಸ್ಪರ್ಶ ನಮ್ಮಿಬ್ಬರಿಗೂ ಆಶ್ಚರ್ಯವನ್ನುಂಟು ಮಾಡಿತ್ತು. ಅವನು ಮುಟ್ಟಿದಲ್ಲಿ ಗಾಳಿ ಮಾತ್ರ ತಾಕಿದಂತಿತ್ತು.

"ಏನಿದು ಸದಾ?" ಎನ್ನುತ್ತ ನಾನೂ ಅವನ ಹೆಗಲು ಮುಟ್ಟಿದೆ. ಗಾಳಿಯನ್ನು ಮಾತ್ರ ಸೋಕಿದಂತೆ, ಅಂಗಿ ಮತ್ತು ಚರ್ಮದ ಸೋಂಕೇ ಇಲ್ಲದಂತೆ ವಿಲಕ್ಷಣ ಅನುಭವವಾಯಿತು.

"ನನಗೂ ಗೊತ್ತಾಗ್ತಿಲ್ಲ, ನೋಡು..." ಎನ್ನುತ್ತ ಅವನೂ ನನ್ನ ಕೈ ಸ್ಪರ್ಶಿಸಿದ. ಊಂಹೂಂ, ಅಲ್ಲೂ ಅಷ್ಟೇ, ಚರ್ಮದ ಅನುಭವವೇ ಇಲ್ಲ. ಬರೀ ಗಾಳಿ ಸೋಕಿದಂತೆ ಖಾಲಿಖಾಲಿಯಾಗಿತ್ತು. ಎರಡು ಟಾರ್ಚ್‌ಗಳನ್ನು ಒಂದೇ ದಿಕ್ಕಿಗೆ ಬಿಟ್ಟ ಬೆಳಕಿನಂತೆ, ಹಾಲೋಗ್ರಾಮಿನ ಇಮೇಜುಗಳಂತೆ ನನ್ನ ಇಡೀ ದೇಹವನ್ನು ಅವನು, ಅವನ ಇಡೀ ದೇಹವನ್ನು ನಾನು ಸೋಕಿದರೂ ಅದು ಗಾಳಿಯನ್ನು ಮಾತ್ರ ಮುಟ್ಟಿದ ಅನುಭವವನ್ನು ಕೊಡುತ್ತಿತ್ತು. ಮೊದಮೊದಲು ನಮಗಿದು ಆಟವಾದರೂ ಕ್ಷಣಗಳು ಕಳೆದ ಹಾಗೆ ಈ ವ್ಯರ್ಥ ಪ್ರಯತ್ನದಿಂದ ಬೇಸತ್ತು ಕಡೆಯಲ್ಲಿ ಇಬ್ಬರೂ ದುಃಖಿತರಾಗಿ, ಮೌನದಲ್ಲಿ ಕುಳಿತುಬಿಟ್ಟೆವು. ಬಹಳ ಹೊತ್ತಿನ ಅನಂತರ ಸದಾನೇ ಮಾತನಾಡಿದ.

"ವಿಶೂ..."

"ಏನಿದ ಸದಾ, ಮುಟ್ಟಾಕ ಆಗಂಗಿಲ್ಲಾಂದ್ರ, ಏನ ಅರ್ಥ ಇದು?"

"ವಿಶೂ... ಹೊರಗಿಂದ ಮುಟ್ಟೋಕೆ ಸಾಧ್ಯವಾಗಿ, ಒಳಗಿಂದು ಏನೂ ಅರ್ಥವಾಗದಿದ್ದರೆ ಇದನ್ನ ನೀನು ಬದಲಿ ಮಾಡಿಕೊಳ್ತಿದ್ದೆಯೇನು?"

ಆ ಪ್ರಶ್ನೆಗೆ ಉತ್ತರ ನಮ್ಮಿಬ್ಬರಿಗೂ ಗೊತ್ತಿತ್ತು. ಅಂದು ಆ ಕಲ್ಲು ಪಾಗಾರದ ಮೇಲೆ ಬಹಳ ಹೊತ್ತಿನ ತನಕ ನಾವಿಬ್ಬರೂ ಕುಳಿತೇ ಉಳಿದೆವು.


**ಕಾವ್ಯಾ ಕಡಮೆ**

ಉತ್ತರ ಕನ್ನಡ ಜಿಲ್ಲೆಯ ಕಡಮೆಯವರು. ಸದ್ಯ ಅಮೆರಿಕದ ನ್ಯೂಜೆರ್ಸಿಯಲ್ಲಿ ವಾಸ. ಪ್ರಕಟಿತ ಕೃತಿಗಳು: 'ಧ್ಯಾನಕೆ ತಾರೀಖಿನ ಹಂಗಿಲ್ಲ', 'ಜೀನ್ಸ್ ತೊಟ್ಟ ದೇವರು' (ಕವನ ಸಂಕಲನಗಳು), 'ಪುನರಪಿ' (ಕಾದಂಬರಿ), 'ಆಟದೊಳಗಾಟ ಮತ್ತು ಡೋರ್ ನಂಬರ್ ಎಂಟು' (ನಾಟಕಗಳು), 'ದೂರ ದೇಶವೆಂಬ ಪಕ್ಕದ ಮನೆ' (ಪ್ರಬಂಧಗಳು), 'ಮಾಕೋನ ಏಕಾಂತ' (ಕಥಾಸಂಕಲನ).